ದಿನಾಂಕಃ 29-03-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ವಾದಿಗಳ ಪರವಾಗಿ ಶ್ರೀ ಟಿ ಎಸ್ ಸಿ ವಕೀಲರಿಂದ**

1. ನಾನು ತಿಮ್ಮಪ್ಪನವರಿಂದ ಜಮೀನನ್ನು ಖರೀದಿಸುವ ಸಮಯಕ್ಕೆ ಸದರಿ ಆಸ್ತಿಯನ್ನು ಅಳತೆ ಮಾಡಿಸಿದ್ದೀರ ಎಂದರೆ ಸಾಕ್ಷಿ ಸದರಿ ಸಮಯಕ್ಕೆ ಸದರಿ ಮಾರಾಟಗಾರರು ಸದರಿ ಆಸ್ತಿಯ ವಿಚಾರವಾಗಿ ದಾವೆ ಹೂಡಿದ್ದರು ಎಂದು ನುಡಿಯುತ್ತಾರೆ. ಆದ್ದರಿಂದ ಸದರಿ ಮಾರಾಟಗಾರರು ಯಾವ ಆಸ್ತಿಯಲ್ಲಿ ಸ್ವಾಧೀನತೆ ಹೊಂದಿದ್ದರು ಎಂದು ನಿಖರವಾಗಿ ಹೇಳಲಾಗುತ್ತಿರಲಿಲ್ಲ ಎಂದರೆ ಸರಿಯಲ್ಲ. ಸದರಿ ನಾವು ಖರೀದಿಸಿದ ಸಮಯಕ್ಕೆ ಖರೀದಿ ಮಾಡಿದ ಆಸ್ತಿಯನ್ನು ಅಳತೆ ಮಾಡಿಸಿಲ್ಲ ಎಂದರೆ ಸರಿ. ಸದರಿ ಕ್ರಯಪತ್ರವಾದ ನಂತರ ಅದರ ಆಧಾರದ ಮೇಲೆ ಸರ್ವೆ ನಂ 9/3ಎ2 ನ ಆಸ್ತಿಯ ಖಾತೆ ಮತ್ತು ಪಹಣಿ ನಮ್ಮ ಹೆಸರಿಗೆ 2015ರಲ್ಲಿ ಬದಲಾಗಿರುತ್ತದೆ. ಈ ದಾವೆಯ ವಾದಿಗಳು ಮತ್ತು ಅವರ ಅಣ್ಣತಮ್ಮಂದಿರು 2015 ರಲ್ಲಿ ಪಾಲುವಿಭಾಗಪತ್ರ ಮಾಡಿಕೊಂಡ ತರುವಾಯ ನಮ್ಮ ಹೆಸರಿಗೆ ಖಾತೆ ಬದಲಾವಣೆಯಾಗಿದೆ ಎಂದರೆ ಸರಿ. ಸದರಿ ಪಾಲುವಿಭಾಗದ ತರುವಾಯ ವಾದಿಗಳು ಹದ್ದುಬಸ್ತಿಗಾಗಿ ಅರ್ಜಿ ಸಲ್ಲಿಸಿ ನೋಟಿಸನ್ನು ನಮಗೆ ಕೊಟ್ಟಿದ್ದರು ಎಂದರೆ ಸರಿಯಲ್ಲ. ಸದರಿ ಅರ್ಜಿಯಾಧಾರದ ಮೇಲೆ ಭೂಮಾಪಕರು ಸ್ಥಳಕ್ಕೆ ಬಂದು ಸರ್ವೆ ಮಾಡಿ ಒತ್ತುವರಿ ಮಾಡಿದ ಬಗ್ಗೆ ವರದಿ ನೀಡಿರುತ್ತಾರೆ ಎಂದರೆ ಸರಿಯಲ್ಲ.

2. ನಿಪಿ-6 ರಲ್ಲಿ ನನ್ನ ತಂದೆಯಾದ ಅಲ್ಲಾಭಕ್ಷಿಯವರ ಸಹಿ ಇದೆ ಎಂದರೆ ಸರಿಯಲ್ಲ. ಸದರಿ ಸರ್ವೆ ಸಮಯಕ್ಕೆ ಸರ್ವೆಯಾದ ತರುವಾಯ ನಮ್ಮ ಹೇಳಿಕೆಗಳನ್ನು ಪಡೆದರು ಮತ್ತು ಸದರಿ ಮಹಜರಿಗೂ ಸಹ ನಮ್ಮ ಸಹಿಯನ್ನು ಪಡೆದಿರುತ್ತಾರೆ ಎಂದರೆ ಸರಿಯಲ್ಲ. ನನ್ನ ತಂದೆಯವರ ಸಮಕ್ಷಮದಲ್ಲೆ ವಾದಿಗಳ ಜಮೀನಿನಲ್ಲಿ ನಾವು ಒತ್ತುವರಿ ಮಾಡಿರುವ ಜಮೀನನ್ನು ನಿಪಿ-5ರಂತೆ ನಕ್ಷೆ ತಯಾರಿಸಿರುತ್ತಾರೆ ಎಂದರೆ ಸರಿಯಲ್ಲ. ದಿಃ05-08-2021 ರಂದು ಆದ ಅಳತೆಯೇ ಮೊಟ್ಟ ಮೊದಲಿಗೆ ಆದ ಅಳತೆಯಾಗಿದ್ದು ಅದಕ್ಕೂ ಮುನ್ನ ನಾವು ನಮ್ಮಜಮೀನನ್ನು ಎಂದಿಗೂ ಅಳತೆ ಮಾಡಿಸಿರಲಿಲ್ಲ ಎಂದರೆ ಸರಿಯಲ್ಲ. ನಾವು ನಿಡಿ-2 ರಂತೆ ಖರೀದಿ ಮಾಡಿದ ಆಸ್ತಿಯ ವಿಸ್ತೀರ್ಣಕ್ಕಿಂತ ಹೆಚ್ಚಿನ ವಿಸ್ತೀರ್ಣದಲ್ಲಿ ಸ್ವಾಧೀನದಲ್ಲಿದ್ದೇವೆ ಎಂದರೆ ಸರಿಯಲ್ಲ. ನಾವು ಹೆಚ್ಚಿನ ವಿಸ್ತೀರ್ಣದಲ್ಲಿ ಪ್ರಸ್ತುತ ಅನುಭವದಲ್ಲಿದ್ದರೂ ಸಹ ಹೆಚ್ಚಿನ ವಿಸ್ತೀರ್ಣವನ್ನು ವಾದಿಗಳಿಗೆ ಬಿಟ್ಟುಕೊಡುವುದನ್ನು ತಪ್ಪಿಸಿಕೊಳ್ಳುವ ಉದ್ದೇಶದಿಂದ ಒತ್ತುವರಿ ಮಾಡಿಲ್ಲ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೆನೆ ಎಂದರೆ ಸರಿಯಲ್ಲ. ವಾದಿಗಳ ಅಣ್ಣ ತಮ್ಮಂದಿರಿಂದ ನಿಡಿ-2 ರಂತೆ ಆಸ್ತಿಯನ್ನು

ಖರೀದಿ ಮಾಡಿದ ತರುವಾಯ ಸದರಿ ನಿಡಿ-2ರಲ್ಲಿರುವ ಆಸ್ತಿಯನ್ನು ನಾವು 1 ರಿಂದ 6 ನೇ ಪ್ರತಿವಾದಿಗಳಿಗೆ ಬೇರೆ ಬೇರೆ ವಿಸ್ತೀರ್ಣಗಳಲ್ಲಿ ಮಾರಾಟ ಮಾಡಿದ್ದು ಸದರಿ ಮಾರಾಟ ಮಾಡುವ ಸಮಯಕ್ಕೂ ಸಹ ನಾವು ಯಾವುದೇ ಹದ್ದುಬಸ್ತು ಸರ್ವೆಯನ್ನು ಮಾಡಿಸಿಲ್ಲ ಎಂದರೆ ಸರಿಯಲ್ಲ. ನಾವು 1 ರಿಂ 6 ನೇ ಪ್ರತಿವಾದಿಗಳಿಗೂ ಸಹ ಒತ್ತುವರಿ ಮಾಡಿದ ಜಮೀನನ್ನೇ ಬಿಟ್ಟುಕೊಟ್ಟಿರುತ್ತೇವೆ ಎಂದರೆ ಸರಿಯಲ್ಲ. ಭೂಮಾಪಕರು ನನ್ನ ತಂದೆಗೆ ಹದ್ದುಬಸ್ತು ಪೂರ್ವ ನೋಟಿಸನ್ನುಜಾರಿ ಮಾಡಿ ನನ್ನತಂದೆಯ ಸಮಕ್ಷವೇ ನಿಪಿ-5 ರಿಂದ 7 ರಂತೆ ಹದ್ದುಬಸ್ತು ಸರ್ವೆಯನ್ನು ಕೈಗೊಂಡು ಅದರಂತೆ ವರದಿ ಸಲ್ಲಿಸಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಸಮಯಕ್ಕೆ 1 ರಿಂದ 6ನೇ ಪ್ರ2ವದಿಗಳು ಸಹ ಸ್ಥಳದಲ್ಲಿ ಹಾಜರಿದ್ದರು ಎಂದರೆ ಸರಿಯಲ್ಲ.

(ವಾದಿ ಪರ ವಕೀಲರು ಮುಂದುವರಿದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು ಸಮಯಾವಕಾಶ ನೀಡಲಾಯಿತು)

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)** **ಓ.ಹೇ.ಕೇ. ಸರಿ ಇದೆ.**

02ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ.ಚನ್ನಗಿರಿ.